# ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎನ್ ಮಂಜೇಗೌಡ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಬಗ್ಗೆ**

---

**ವಿಷಯ:**

2008 ಕರ್ನಾಟಕ ಸುವರ್ಣ ಮಹೋತ್ಸವದ ಅಂಗವಾಗಿ ಏಕಗವಾಕ್ಷಿ ಯೋಜನೆ ಮೂಲಕ ಉನ್ನತ ಗುಣಮಟ್ಟದ ಪುಸ್ತಕಗಳ 300 ಪ್ರತಿಗಳನ್ನು ನೇರವಾಗಿ ಪ್ರಕಾಶಕರು ಮತ್ತು ಲೇಖಕರಿಂದ ಸಗಟು ದರದಲ್ಲಿ ಖರೀದಿಸಿ ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಗ್ರಾಮಪಂಚಾಯಿತಿ ಗ್ರಂಥಾಲಯಗಳಿಗೆ ಸರಬರಾಜು ಮಾಡುವ ಯೋಜನೆಯು ಕಳೆದ ಎರಡು ವರ್ಷಗಳಿಂದ ಸ್ಥಗಿತ ಗೊಂಡಿದ್ದು, ಮುಂದುವರೆಸುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ**

ಸರ್ಕಾರದ ಪತ್ರ ಸಂಖ್ಯೆ: ಇಡಿ 41 ಎಲ್.ಐ.ಬಿ. 2006, ಬೆಂಗಳೂರು ದಿ: 10-05-2006ರಲ್ಲಿ "ಏಕಗವಾಕ್ಷಿ" ಮೂಲಕ ಲೇಖಕ ಪ್ರಕಾಶಕರ ಗ್ರಂಥಗಳನ್ನು ಕೊಳ್ಳುವ ಬಗ್ಗೆ ತಿಳಿಸಲಾಗಿರುತ್ತದೆ. ಅದರನ್ವಯ, ಕನ್ನಡ ಪುಸ್ತಕಗಳ ಸಗಟು ಖರೀದಿಗಾಗಿ 2006-07ನೇ ಸಾಲಿಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ನಿಗದಿಮಾಡಲಾದ ಅನುದಾನದಲ್ಲಿ "ಏಕಗವಾಕ್ಷಿ" ಪದ್ಧತಿ ಮುಖಾಂತರ ಪುಸ್ತಕ ಖರೀದಿ ಪ್ರಕ್ರಿಯೆಯನ್ನು ಜಾರಿಗೆ ತರಲಾಗಿರುತ್ತದೆ.

2022-23ನೇ ಸಾಲಿನವರೆಗೆ ಏಕಗವಾಕ್ಷಿ ಪದ್ಧತಿ ಮುಖಾಂತರ ಖರೀದಿಸಲಾದ ಪುಸ್ತಕಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಗ್ರಂಥಾಲಯಗಳು, ಶಾಖಾ ಗ್ರಂಥಾಲಯಗಳು ಹಾಗೂ ಇತರೆ ಗ್ರಂಥಾಲಯಗಳಿಗೆ ನಿಯಮಾನುಸಾರ ಸರಬರಾಜು ಮಾಡಲಾಗುತ್ತಿತ್ತು. ಮುಂದುವರೆದು, 2023-24ನೇ ಸಾಲಿನ ಜುಲೈ ಆಯವ್ಯಯ ಭಾಷಣದ ಆಯವ್ಯಯ ಘೋಷಿತ ಕಂಡಿಕೆ:96 ರಂತೆ ರಾಜ್ಯದ ಸಾಹಿತಿಗಳ ಹಾಗೂ ಪ್ರಕಾಶಕರ ಬೇಡಿಕೆಗಳಿಗೆ ಸ್ಪಂದಿಸಿ ಸಾರ್ವಜನಿಕ ಗ್ರಂಥಾಲಯಗಳಿಗೆ ಉತ್ತಮ ಪುಸ್ತಕಗಳನ್ನು ಖರೀದಿಸಲು ಉಪಶೀರ್ಷಿಕೆ:059, 422 ಮತ್ತು 423 ರಡಿ ರೂ.1000.00 ಲಕ್ಷಗಳನ್ನು ಒದಗಿಸಲು ಘೋಷಿಸಲಾಗಿದ್ದು, ರೂ.855.40 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಅದರಂತೆ ಸದರಿ ಮೊತ್ತಕ್ಕೆ ಪುಸ್ತಕ ಖರೀದಿಸಿ ಆಯ ವ್ಯಯ ಘೋಷಣೆಯನ್ನು ಅನುಷ್ಠಾನಗೊಳಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 64 ಎಲ್.ಐ.ಬಿ. 2015, ಬೆಂಗಳೂರು ದಿನಾಂಕ: 26-02-2019ರಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಅಧೀನದಲ್ಲಿರುವ ಗ್ರಾಮ ಪಂಚಾಯಿತಿ ಗ್ರಂಥಾಲಯಗಳ ಸಂಪೂರ್ಣ ನಿರ್ವಹಣೆಯನ್ನು, ಅನುದಾನವು ಸೇರಿದಂತೆ ಗ್ರಂಥಾಲಯ ಸೆಸ್‌ಅನ್ನು ತಪ್ಪದೇ ಗ್ರಾಮ ಪಂಚಾಯಿತಿ ಗ್ರಂಥಾಲಯಗಳಿಗೆ ಬಳಸುವಂತೆ ತಿಳಿಸುವ ಮೂಲಕ, ಗ್ರಾಮ ಪಂಚಾಯಿತಿ ಗ್ರಂಥಾಲಯಗಳನ್ನು

..2

ಗ್ರಾಮ ಪಂಚಾಯಿತಿಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮೂಲಕ ದಿನಾಂಕ: 01-03-2019ರಿಂದ ಜಾರಿಗೆ ಬರುವಂತೆ ವರ್ಗಾಯಿಸಲು ಆದೇಶಿಸಲಾಗಿರುತ್ತದೆ. ಆದುದರಿಂದ ಕಳೆದ ಎರಡು ಆರ್ಥಿಕ ವರ್ಷಗಳಿಂದ ಏಕಗವಾಕ್ಷಿ ಪದ್ಧತಿಯಡಿ ಯಾವುದೇ ಪುಸ್ತಕಗಳನ್ನು ಖರೀದಿಸಲಾಗಿರುವುದಿಲ್ಲ.

**ಸಂಖ್ಯೆ: ಇಪಿ/ 152 /ಎಲ್ಐಬಿ /2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು